# ಹೊಡೆಮರಳ ಕಲಿತ ಶ್ರೀಕೃಷ್ಣ ನಾಗರ

## (ಗೋಪಾಲಕೃಷ್ಣ ಸುಳಾದಿ)

1. **Ref.:** Shri Purandara Dasara Sahitya Part – 4, Krishna Leele, edited by Shri Betageri Krishna Sharma and Shri Bengeri Huchhu Rayaru, page No. 22.
2. **Ref.:** Samagra Dasa Sahitya, Samputa 4, published by Kannada & Culture Dept, Govt of Karnataka, Bengaluru, page No. 131.
3. **Note:** Lyrics given here are as per Ref. 1. The wordings in Ref. 2 are same as in Ref. 1. This suladi is not available in the reference book by Sri Pavanje Guru Rao

### ಧ್ರುವ ತಾಳ

ಹೊಡೆಮರಳ ಕಲಿತ ಶ್ರೀಕೃಷ್ಣ ನಾಗರ
ಹೆಡೆಯಂತೆ ತಲೆಯೆತ್ತಲು ಕಲಿತ ಕೃಷ್ಣ
ಕಡುಮುದ್ದು ಸುರಿವಂತೆ ನಗಲು ಕಲಿತ ಕೃಷ್ಣ
ನುಡಿಯ ಕಲಿತ ಉಗ್ಗು ಉಗ್ಗು ಎಂದು ಕೃಷ್ಣ
ಉಡಿಗಂಟೆ ಹುಲಿಯುಗುರರಳೆಲೆ ಮಾಗಾಯಿ
ಕಡಗ–ಕಂಕಣದಿಂದ ಮುದ್ದು ಮೆರೆವ ಕೃಷ್ಣ
ಮಡದಿಯರೆತ್ತಿ ಮುದ್ದಾಡಿಸಲವರ ಓ–
ರುಡೆಯ ಮೇಲೆದ್ದು ಕುಣಿವನು ಕೃಷ್ಣ
ಪಿಡಿ ಹೊನ್ನು ಗುಬ್ಬಿ ತಾ ಹೊನ್ನ ಗುಬ್ಬಿಯ ನಾಡಿ
ಜಡಿದು ಚಪ್ಪಾಳೆಯಿಕ್ಕುವನು ಕೃಷ್ಣ
ಮೃಡಮುಖ್ಯ ಸುರರು ಅಂಬರದಲಿ ನೋಡಿ ನೋಡಿ
ಕಡುವೊಪ್ಪಿ ತುತಿಸಿ ಹಾರೈಸುತಿರೆ
ಕಡೆಗಣ್ಣಿನಿಂದವರ ನೋಡಿ ನಲಿವ ನಮ್ಮ

ಒಡನಾಡಿ ಪುರಂದರ ವಿಠಲ ಗೋಪಾಲಕೃಷ್ಣ ॥ ೧ ॥

**ಮಟ್ಟೆ ತಾಳ**

ಗಂಡಸ್ಥಳದಲ್ಲಿ ಮಣಿಯ ಕೆಚ್ಚಿದ ಮಕರ-
ಕುಂಡಲಗಳು ತೂಗೆ ಪ್ರತಿಬಿಂಬಿಸುತಿರಲು
ಪುಂಡರೀಕಾಕ್ಷನ ಉತ್ತಮಾಂಗದಲಿ ರವಿ-
ಮಂಡಲಗಳ ಪ್ರಭೆಯ ಮಸಳಿಸುತಿರೆ ಮುಕುಟ
ಹಿಂಡು ಗೋಪಿಯರೊಡನೆ ಆಟವನಾಡುವ ಉ-
ದ್ದಂಡ ಬಾಲಕ ಪುರಂದರ ವಿಠಲ ಗೋಪಾಲಕೃಷ್ಣ ॥ ೨ ॥

**ರೂಪಕ ತಾಳ**

ಕನ್ನಡಿಯಂತೆ ಕೋರೈಸುತಿಹ
ರನ್ನದಾಕರದ ರಾಜಾಂಗಣದಲ್ಲಿ
ಘನ್ನ ಮಹಿಮ ಅಂಬೆಗಾಲಿಕ್ಕುತ ಬರುತ
ತನ್ನ ರೂಹನು ಕಂಡು ಸನ್ನೆ ಮಾಡುವ ನಗುವ
ಚೆನ್ನವಾಡಲು ನಗುತ ಜೋಯೆಂದಮ್ಮ
ಚಿನ್ನಾಟವಾಡುವ ಹೋಯೆಂದು ಪಾಡುವ
ಎನ್ನ ಮುದ್ದು ಪುರಂದರ ವಿಠಲ ರಾಯ
ಚೆನ್ನಿಗ ಚೆಲುವ ಗೋಪಾಲಕೃಷ್ಣ ॥ ೩ ॥

**ಝಂಪೆ ತಾಳ**

ಅಂಬೆಗಾಲಿಕ್ಕುತಲಿ ಬಂದ ಗೋವಿಂದ
ತುಂಬಿಗುರುಳರಳೆಲೆಯ ನೊಸಲಲೊಲೆಯುತ
ರಂಭೆ ಗೋಪಿಯಿದ್ದೆಡೆಗೆ ಬಂದು
ಉಂಬೆ ನಾನಮ್ಮೆಯನು ಎನುತಚ್ಯುತ
ತುಂಬಿದೊಳಗಣ ಜಗಂಗಳ ಹೊಟ್ಟೆಯ
ತುಂಬುವನ ತಾತ ನಗುತ ನಲಿಯುತ
ನಂಬಿದವರ ಪೊರೆವ ಭಕುತರ ಕು-
ಟುಂಬಿ ಪುರಂದರ ವಿಠಲ ಗೋಪಾಲಕೃಷ್ಣ ॥ ೪ ॥

**ತ್ರಿವಿಡೆ ತಾಳ**

ಬಲಗೈಯಿಂದಲಿ ತೆಗೆದು ಎಡಗೈ ಬೆಣ್ಣೆ ಮುದ್ದೆಯ
ಮೆಲುವ ಕೃಷ್ಣ, ಗೆಳೆಯ ಗೋಪಾಲರಿಗೆಲ್ಲ
ಮೆಲಿಸುತ್ತ ಬಲಭದ್ರ ರಾಮಗೆ ಸಮೀಪದೊಳಿರುತ
ಇಳೆಯಯ್ಯನಯ್ಯ ಬಾಲಕನಾದ ಪುರಂದರ ವಿಠಲ ಗೋಪಾಲಕೃಷ್ಣ ॥ ೫ ॥

**ಅಟ ತಾಳ**

ವಟಪತ್ರದೊಳಡಗಿದ್ದು ಪ್ರಳಯದಲ್ಲಿ
ಪುಟ್ಟ ಪುಟ್ಟ ಕೈಯಲಿ ಪುಟ್ಟ ಪುಟ್ಟ ಪಾದ ದುಂ-
ಗುಟವ ಪಿಡಿದು ಪೀರುವ ಶಿಶುವೀತನು
ಪುಟ್ಟ ಪುಟ್ಟ ಸೃಷ್ಟೀಶ ಪುರಂದರ ವಿಠಲ ಗೋಪಾಲಕೃಷ್ಣ ॥ ೬ ॥

**ಏಕ ತಾಳ**

ಮಂದರಗಿರಿಯ ಕಡೆದ ತೋಳೊ – ಕೃಷ್ಣ

ಸಿಂಧುವನಂಬಿನ ಮನೆಗೆ ತಂದ ತೋಳೊ – ಕೃಷ್ಣ

ಬಂದಿಬಾಹು ಬಳೆಯನಿಟ್ಟ ತೋಳೊ – ಕೃಷ್ಣ

ಇಂದ್ರಾದಿಗಳಾಶ್ರಯಿಸುವ ತೋಳೊ – ಕೃಷ್ಣ

ಚಂದನ ಕುಂಕುಮ ಕಸ್ತೂರಿ ಇಟ್ಟ ತೋಳೊ – ಕೃಷ್ಣ

ಇಂದಿರಾ ದೇವಿಯನಪ್ಪುವ ತೋಳು ತೋಳು ತೋಳು

ಕಂದ ಹರಿ ತೋಳನ್ನಾಡ್ಯೆ ಇಂ–

ತೆಂದು ಗೋಪೀ ದೇವಿ ತೋಳನ್ನಾಡಿಸೆ ಪು–

ರಂದರ ವಿಠಲ ಗೋಪಾಲಕೃಷ್ಣ ಆಡಿದ ॥ ೭ ॥

**ಜತೆ**

ಬಾಲಕ ಲೀಲಾಲೋಲ ಗೋಪಾಲನು

ಮೂಲ ಪುರಂದರ ವಿಠಲ ಗೋಪಾಲಕೃಷ್ಣ ॥ ೮ ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಬಾಲಕೃಷ್ಣನ ವಿವಿಧ ಅವಸ್ಥೆಗಳನ್ನು ಈ ಸುಳಾದಿಯಲ್ಲಿ ದಾಸರು ವಿವರವಾಗಿ ಬಣ್ಣಿಸಿ ಹೇಳಿದ್ದಾರೆ.

೧. **ಹೊಡೆ ಮರಳು** = ಹೊಟ್ಟೆ ಮೇಲಾಗಿ ಮಲಗು

**ಉಗ್ಗು ಉಗ್ಗು** = ಮಗುವಿನ ಮಾತಿನ ಆರಂಭದ ಸ್ಥಿತಿ

**ವಾರುಡೆ** = ಒರಣವಾದ ಸೊಂಟ

**ಮೃಡ** = ಶಿವ

**ನಮ್ಮ ಒಡನಾಡಿ** = ಭಕ್ತರ ಸಂಗಾತಿ

೨. **ಗಂಡಸ್ಥಳ** = ಕೆನ್ನೆ

**ಉತ್ತಮಾಂಗ** = ತಲೆ

**ಮಸಳಿಸು** = ಕುಂದಿಸು, ಕುಗ್ಗಿಸು

೩. **ಕೊರೆಯಿಸುವ** = ಕಣ್ಣು ಕುಕ್ಕುವ

**ರೂಹು** = ರೂಪ

೪. **ತುಂಬಿ-ಗುರುಳು** = ಗುಂಗಿ ಹುಳುವಿನಂತೆ ಕಪ್ಪಾದ ಉಂಗುರು ಕೂದಲು

**ನೊಸಲು** = ಹಣೆ

**ಒಳಗಣ ಜಗಂಗಳ ಹೊಟ್ಟೆಯ ತುಂಬುವನಕ** = ತನ್ನ ಹೊಟ್ಟೆಯಲ್ಲಿದ್ದ ಜಗತ್ತಿನ ಎಲ್ಲ ಜೀವಿಗಳ ಹೊಟ್ಟೆ ತುಂಬುವ ವರೆಗೆ

೫. **ಬಾಲಭದ್ರ ರಾಯ** = ಬಲರಾಮ

**ಇಳೆಯ + ಅಯ್ಯನ + ಅಯ್ಯ** = ಬ್ರಹ್ಮನ ತಂದೆ - ಶ್ರೀ ಕೃಷ್ಣ

೭. **ಮಂದರ ............ ತೋಳೊ** = ಕೂರ್ಮಾವತಾರ

**ಸಿಂಧುವಿನಂಬಿನ ............. ತೋಳೊ :** - ರಾಮನು, ಸಮುದ್ರ ರಾಜನಿಗೆ ಲಂಕೆಗೆ ಹೋಗಲು ದಾರಿ ಮಾಡಿಕೊಡೆಂದು ಪ್ರಾರ್ಥಿಸಿದನು. ಸಮುದ್ರ ರಾಜನು ಕೇಳದಿರಲು, ಆಗ ಅವನ ಮೇಲೆ ಅವನು ಬಾಣ ಪ್ರಯೋಗ ಮಾಡಿದನು.

**ಬಂದಿ** = ತೋಳ್ಬಂದಿ

**Classification:** Suladi
**Name of Suladi:** gOpAlakrishNa suLAdi
**Ankita:** purandara vittala
**Location:** NA
**Category:** Krishna Leele

**Sub-Category:** Krishna, uraga, nage, abharana, patni, gubbi, bangara, shiva, sura, akasha, kannu, pratibimba, gopi, ATa, Gopala, kannadi, ratna, govinda, achyuta, loka, hotte, kai, mitra, Balarama, bhumi, brahma, aladele, pralaya, koosu, parvata, Samudra, indra,

**Pravachana:** NA

**Explanation:** NA